International Journal of Kannada Research
www.kannadajournal.com

ISSN: 2454–5813
IJKR 2024; 10(1): 20-22
© 2024 IJKR
www.kannadajournal.com
Received: 15-11-2023
Accepted: 19-12-2023

**ಡಾ.ಸೀತಾ.ಹೆಚ್.ಎನ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು, ಕರ್ನಾಟಕ, ಭಾರತ

**Corresponding Author:**
**ಡಾ.ಸೀತಾ.ಹೆಚ್.ಎನ್**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ನಂಜನಗೂಡು, ಕರ್ನಾಟಕ, ಭಾರತ

# ಎಂ.ಕೆ.ಇಂದಿರಾ ಕಾದಂಬರಿಗಳಲ್ಲಿ ಮಹಿಳಾ ಸಬಲೀಕರಣ

**ಡಾ.ಸೀತಾ.ಹೆಚ್.ಎನ್**

**DOI:** https://doi.org/10.22271/24545813.2024.v10.i1a.925

**ಪೀಠಿಕೆ**

ಕನ್ನಡದಲ್ಲಿ ಕಾದಂಬರಿಕಾರ್ತಿಯರು ವಿರಳವಾಗಿದ್ದ ಕಾಲದಲ್ಲಿ ಕೇಳಿ ಬಂದ ಹೆಸರು ಎಂ.ಕೆ.ಇಂದಿರಾ ಅವರದು. ಇಂದಿರಾ ಅವರು ಬರವಣಿಗೆಗೆ ತೊಡಗಿದ್ದೇ ಜೀವನಾನುಭವ ಪಕ್ವವಾದ ಮೇಲೆ. ಬರಹ ಬರೀ ಉತ್ಸಾಹವಾಗದೇ ಅವರ ಬರಹವೇ ವೃತ್ತಿಯಾಗಬೇಕಾದ ಅನಿವಾರ್ಯತೆಗಳಿದ್ದವು. ಆದರೆ ಬರವಣಿಗೆಯಿಂದಲೇ ಬದುಕನ್ನು ನಿರ್ವಹಿಸುವುದು ಕನ್ನಡದ ಸಂದರ್ಭದಲ್ಲಿ ಕಷ್ಟಕರವಾದುದಾದರೂ ಅದನ್ನು ಇಂದಿರಾ ಅವರು ಸವಾಲಾಗಿ ಸ್ವೀಕರಿಸಿದರು. ಮಹಿಳಾ ಸಾಹಿತ್ಯ ತನ್ನ ಸಿರಿವಂತಿಕೆಯನ್ನು ಕಂಡುಕೊಳ್ಳುವ ದಿಕ್ಕಿನತ್ತ ಶ್ರಮಿಸಿದ ಮಹಿಳೆಯರ ಪೈಕಿ ಇಂದಿರಾ ಕೂಡ ಒಬ್ಬರಾದರು.

ಇಂದಿರಾ ಅವರು ಶಾಲೆಯಲ್ಲಿ ಓದಿದ್ದು, ತಿಳಿದಿದ್ದು ಕಡಿಮೆಯಿದ್ದರೂ ಜೀವನರಂಗವೇ ಅವರಿಗೆ ಶಿಕ್ಷಣರಂಗವಾಯಿತು. ಗೊಡ್ಡುಸಂಪ್ರದಾಯ, ಅಂಧಶ್ರದ್ಧೆ ತುಂಬಿದ್ದ ಪರಿಸರದಲ್ಲಿ ಇಂದಿರಾ ಅವರು ವಿಚಾರವಂತೆಯಾದುದು ಪರಿಸ್ಥಿತಿಯ ಒತ್ತಡದಿಂದಲೇ. ಈ ಕಾರಣದಿಂದಾಗಿಯೇ ಸಮಾಜದ ರೀತಿನೀತಿಗಳ ವಿರೋಧಿಯಾಗಬೇಕಾದುದು ಅವರಿಗೆ ಅನಿವಾರ್ಯವಾಯಿತು.

ಇಂದಿರಾ ಅವರದು ನೋವುಂಡ ಬದುಕು. ಪತಿಯನ್ನು, ನಾಲ್ಕು ಮಕ್ಕಳನ್ನು, ಒಡಹುಟ್ಟಿದವರನ್ನು ಕಳೆದುಕೊಂಡು ಪರಿತಪಿಸಿ ನೊಂದ ಜೀವಿ. ಆದರ್ಶಗಳನ್ನು ಇರಿಸಿಕೊಡಿದ್ದ ಅವರ ಪತಿ ಆಸ್ತಮಾ ಕಾಯಿಲೆಯಿಂದ ನರಳುತ್ತಿದ್ದಾಗ ಇಂದಿರಾ ಅವರಿಗೆ ಹೀಗೆ ಹೇಳಿದ್ದರಂತೆ. ' ನನ್ನ ಸಾವಿನ ಬಳಿಕ ನೀನು ಯಾವುದೇ ಅಂಧಶ್ರದ್ಧೆಗೂ ಬಲಿಯಾಗಬೇಡ. ಮಾಂಗಲ್ಯದ ವಿನಾ, ಉಳಿದೆಲ್ಲಾ ಹಾಗೆಯೇ ಇರಲಿ. ಬಳೆ ಕಾಲುಂಗುರ, ಮೂಗುತಿ, ಕುಂಕುಮ ಯಾವುದನ್ನು ತೆಗೆಯಬೇಡ" ಎಂದಿದ್ದರಂತೆ. ಹಾಗಾಗಿಯೇ ಇಂದಿರಾ ಅವರು ರಚಿಸಿರುವ ಕಾದಂಬರಿಗಳಲ್ಲಿ ಇಂತಹದೇ ವಿಚಾರಗಳನ್ನು ಉಳಿಸಿಕೊಳ್ಳಲು ಪ್ರಯತ್ನಿಸಿರುವುದು ಕಂಡು ಬರುತ್ತದೆ. ಇಂದಿರಾ ಅವರು ಬದುಕಿನಲ್ಲಿ ಪಡೆದ ಸುಧೀರ್ಘ ಜೀವನಾನುಭವವೇ ಅವರ ಸಾಹಿತ್ಯ ಸೃಷ್ಟಿಗೆ ಬಂಡವಾಳವಾಯಿತು. ಮೊಮ್ಮಗಳನ್ನು ಕಂಡ ನಂತರ ತಮ್ಮ ನಲವತ್ತಾರೆಯ ವಯಸ್ಸಿನಲ್ಲಿ ಬೆಳಕಿಗೆ ಬಂದ ಇಂದಿರಾ ಅವರು ಸಂಪ್ರದಾಯ ವಾತಾವರಣದಲ್ಲೇ ಹುಟ್ಟಿದ್ದರೂ, ಅಂದಿನ ಜನರಲ್ಲಿದ್ದ ಅಜ್ಞಾನ, ಮೂಢನಂಬಿಕೆ, ಅಂಧಶ್ರದ್ಧೆ ಇವನ್ನು ಕಂಡು ನೊಂದು, ತಮ್ಮ ಕೃತಿಗಳಲ್ಲೆಲ್ಲಾ ಸಮಾಜದ ಡಾಂಭಿಕತೆ, ಅಜ್ಞಾನ, ಮೂಢನಂಬಿಕೆಗಳನ್ನು ಬಯಲಿಗೆಳೆದಿದ್ದಾರೆ.

ಇಂದಿರಾ ಅವರಿಗೆ ಬರೆಯಬೇಕೆನ್ನುವ ಛಲವಿದ್ದಿತಾದರೂ, ತಾನು ದೊಡ್ಡವಳೇನೂ ಅಲ್ಲ ಎಂಬ ನಿರಾಡಂಬರ ನಿಲುವನ್ನು ಇರಿಸಿಕೊಂಡಿದವ್ದರು. ಇಪ್ಪತ್ತೆರಡು ವರ್ಷಗಳಲ್ಲಿ ಐವತ್ತೈದು ಕೃತಿಗಳನ್ನು ರಚಿಸಿದ ಕೀರ್ತಿ ಇವರದಾಗಿದೆ. ಅವುಗಳ ಪೈಕಿ ನಲವತ್ತು ಕಾದಂಬರಿವರ್ಗಕ್ಕೆ ಸೇರಿದರೆ, ಹನ್ನೆರಡು ಕಥಾಸಂಕಲನಗಳ ಗುಂಪಿಗೆ ಸೇರುತ್ತವೆ. ಮತ್ತಿತ್ತರ ಕೃತಿಗಳು ಮೂರು.ಕತೆ,ಹರಟೆ, ಪ್ರವಾಸ ಕಥನ, ಲೇಖನ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೆಲಸ ಮಾಡಿದರು. ವಿಶೇಷವಾಗಿ ಇಂದಿರಾ ಅವರದು ಕಾದಂಬರಿ ಕ್ಷೇತ್ರದಲ್ಲಿ ಪ್ರಥಮ ವರ್ಗದ ಫಸಲಾಗಿದೆ. ಇವರ ಕಾದಂಬರಿಗಳೆಲ್ಲ ಸಾಮಾಜಿಕವಾದವುಗಳಾಗಿದ್ದು, ಸಮಾಜದ ಗಂಭೀರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿವೆ. ಸಮಾಜದ ಕಟ್ಟುಪಾಡಿನಲ್ಲಿ ಹುಟ್ಟಿಕೊಂಡ ಬಾಲ್ಯವಿವಾಹ, ವೇಶ್ಯಾಸಮಸ್ಯೆ, ಆರ್ಥಿಕ ವ್ಯವಸ್ಥೆಯಿಂದ ಹುಟ್ಟಿಕೊಂಡ ಬಡತನ, ವರದಕ್ಷಿಣೆ, ಅಂಗವಿಕಲತೆ, ಮತಮಾನ್ಯಗಳಲ್ಲಿ ನಡೆಯುವ ಮೋಸ, ಕಪಟ ಸಂನ್ಯಾಸಿಗಳ ಡಾಂಭಿಕತೆ, ಮೂಢನಂಬಿಕೆ, ಅವೈಚಾರಿಕತೆ, ಸ್ತ್ರೀಶೋಷಣೆ, ಬಂಜೆಯರ ಬಾಳಿನ ಚಿತ್ರಣ, ಭಗ್ನಪ್ರಣಯ, ಅಂತರ್ಜಾತಿ ವಿವಾಹ ಸಮಸ್ಯೆ– ಇವೇ ಮೊದಲಾದ ವಿಷಯಗಳು ಇವರ ಕಾದಂಬರಿಗಳ

ವಸ್ತುಗಳಾಗಿವೆ. ವಾಸ್ತವತೆಗೆ ನಿಷ್ಟರಾದ ಇಂದಿರಾ ಅವರ ಕಾದಂಬರಿಗಳಲ್ಲಿ ಹೆಚ್ಚು ಕಂಡು ಕೇಳಿದ ಘಟನೆಗಳೇ ಚಿತ್ರಣಗೊಂಡಿವುರುವುದನ್ನು ಕಾಣಬಹುದು. ತುಂಗಭದ್ರ, ಜಾಲ, ನಾಗವೀಣಾ, ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ, ಗಿರಿಬಾಲೆ, ಆತ್ಮಸಖಿ, ತಗ್ಗಿನಮನೆಸೀತೆ, ತಾಪದಿಂದ ತಂಪಿಗೆ, ವರ್ಣಲೀಲೆ ಹಾಗೂ ತಪೋವನ –ಈ ಕಾದಂಬರಿಗಳು ಇಂದಿರಾ ಅವರ ಸಾಹಿತ್ಯಿಕ ಸಿದ್ಧಿಯ ಅತ್ಯುತ್ತಮ ಉದಾಹರಣೆಗಳಾಗಿವೆ.

ಇಂದಿರಾ ಅವರು ೧೯೬೩ ರಲ್ಲಿ 'ತುಂಗಭದ್ರ' ಎನ್ನುವ ಕಾದಂಬರಿ ಬರೆಯುವುದರ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದರು. ೧೯೬೦ರಲ್ಲಿಯೇ ಈ ಕಾದಂಬರಿಯನ್ನು ಬರೆದಿದ್ದರೂ, ಪ್ರಕಾಶಕರು ಈ ಕಾದಂಬರಿಯ ಹಸ್ತಪ್ರತಿಯನ್ನು ಕಳೆದು ಹಾಕಿದರಂತೆ. ಆಗ ಇಂದಿರಾ ಅವರು ಮಗು ಕಳೆದುಕೊಂಡವರಂತೆ ರೋದಿಸಿದರಂತೆ. ಆನಂತರದ ದಿನಗಳಲ್ಲಿ ನೆನಪಿನ ಆಧಾರದ ಮೇಲೆಯೇ ಈ ಕಾದಂಬರಿಯನ್ನು ಪುನರ್ ಸೃಷ್ಟಿಸಿ ೧೯೬೩ ರಲ್ಲಿ ಪ್ರಕಟಿಸಿದರಂತೆ. ಬದುಕಿನ ಬಗೆಗೆ ಅಪಾರವಾದ ಶ್ರದ್ಧೆ ಇರಿಸಿಕೊಂಡಿದ್ದ ಇಂದಿರಾ ಅವರು ಬದುಕಿಗೆ ಅಂಜದೆ, ಏನೇ ಬಂದರೂ ಎದುರಿಸಬೇಕು, ನೋವನ್ನು ನುಂಗಿ ನಗೆಯನ್ನು ಹಂಚಬೇಕು ಎಂಬ ಧೋರಣೆ ತಳೆದವರು. ಈ ವಿಚಾರವನ್ನೇ 'ತುಂಗಭದ್ರ ಕಾದಂಬರಿಯ ಪ್ರತಿಯೊಂದು ಪಾತ್ರದಲ್ಲೂ ಅಭಿವ್ಯಕ್ತಿಸಿದ್ದಾರೆ. ಇಲ್ಲಿನ ಕತೆ ಮಲೆನಾಡಿನ ಹವ್ಯಕರ ಕುಂಟುಂಬಕ್ಕೆ ಸಂಬಂಧಿಸಿದುದಾಗಿದೆ. ತುಂಗಭದ್ರರ ಕುರುಡುತನ,ಬಾಲ್ಯವಿವಾಹ ಕಡ್ಡಾಯವಾಗಿದ್ದ ಅಂದಿನ ಸಾಮಾಜಿಕ ಹಿನ್ನೆಲೆಯಲ್ಲಿ ಆ ಕುರುಡು ಸಹೋದರಿಯರಿಗಾಗಿ ಕುಂಟುಂಬದವರು ಮಾಡುವ ತ್ಯಾಗ, ತೋರುವ ಔದಾರ್ಯ, ಅನುಕಂಪ ಇವುಗಳಲ್ಲಿ ಲೇಖಕಿಯ ಭಾವನಾದೃಷ್ಟಿ ವ್ಯಕ್ತವಾಗಿದೆ. ಹೆಂಡತಿ ಕೃಷ್ಣವೇಣಿಯನ್ನು ಕಳೆದುಕೊಂಡ ಮುದ್ದುರಾಮ, ಆಕೆಯ ಮಾತಿನಂತೆಯೇ ತುಂಗಭದ್ರ ಮತ್ತು ಮಂದಾಕಿನಿಯನ್ನು ವಿವಾಹವಾಗುತ್ತಾನೆ. ಹೃದಯವೆಂಬುದು ಆಶೆ,ಆಕಾಂಕ್ಷೆ ಎಲ್ಲರಿಗೂ ಒಂದೇ ಆದ್ದರಿಂದ ಮಾನವೀಯ ದೃಷ್ಟಿಯಿಂದ ನೋಡಬೇಕು. ಅವರಿಗೂ ಹೊಸ ಬಾಳನ್ನು ಕೊಡಬೇಕಾದ ಅಗತ್ಯವನ್ನು 'ತುಂಗಭದ್ರೆ' 'ಹಸಿವು' 'ಬಿದಿಗೆಚಂದ್ರಮ' –ಇವೇ ಮೊದಲಾದ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ.

ಇನ್ನು ಇಂದಿರಾ ಅವರು ಬಾಲ್ಯವಿವಾಹ, ವಿಧವಾವಿವಾಹ ಸಮಸ್ಯೆ, ಸ್ತ್ರೀಶೋಷಣೆ, ಜಾತಿಸಮಸ್ಯೆ, ವೇಶ್ಯಾಸಮಸ್ಯೆ–ಈ ವಿಷಯಗಳನ್ನು ಕುರಿತು ಗೆಜ್ಜೆಪೂಜೆ, ಸದಾನಂದ, ಫಣಿಯಮ್ಮ,ಜಾತಿಕೆಟ್ಟವಳು, ತಪೋವನ,– ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಇಂದಿರಾ ಅವರ 'ಗೆಜ್ಜೆಪೂಜೆ' ಕಾದಂಬರಿ ವೇಶ್ಯಾ ಸಮಸ್ಯೆಯನ್ನು ಕುರಿತದ್ದಾಗಿದ್ದು, ಹಣದ ವ್ಯಾಮೋಹ, ಹೆಣ್ಣಿ ಅಸಹಾಯಕತೆ, ಪುರುಷನಸ್ವಾರ್ಥ ಇವೆಲ್ಲವೂ ವೇಶ್ಯಾಪದ್ದತಿಗೆ ಹೇಗೆ ಕಾರಣವಾಗುತ್ತದೆಂಬುದನ್ನು ಇಲ್ಲಿ ಮನಗಾಣಿಸಿದ್ದಾರೆ. ಇಡೀ ಕಾದಂಬರಿಯಲ್ಲಿ ಹೆಣ್ಣಿಗೆ ಹೆಣ್ಣೇ ಶತೃವಾಗಿ ವೇಶ್ಯಾವೃತ್ತಿಗೆ ನೂಕುವುದನ್ನು ಕಾಣುತ್ತೇವೆ. ಇಲ್ಲಿನ ಸಮಸ್ಯೆ ಹಳೆಯದಾದರೂ ಅದನ್ನು ಹೇಳುವ ಇಂದಿರಾ ಅವರ ಕತೆಗಾರಿಕೆ ಮೆಚ್ಚುವಂತದ್ದಾಗಿದೆ.

ಫಣಿಯಮ್ಮ ಕಾದಂಬರಿ ಇಂದಿರಾ ಅವರಿಗೆ ಅಪಾರವಾದ ಖ್ಯಾತಿಯನ್ನು ತಂದುಕೊಟ್ಟ ಜನಪ್ರಿಯ ಕಾದಂಬರಿ. ಈ ಕೃತಿ ಅನೇಕ ಬಾರಿ ಮರುಮುದ್ರಣಗೊಂಡು ರಾಜ್ಯ ಸಾಹಿತ್ಯ ಆಕಾಡೆಮಿ ಪ್ರಶಸ್ತಿಯನ್ನು ಗಳಿಸಿದೆ. ಬಾಲ್ಯದಲ್ಲೇ ವಿಧವೆಯಾಗಿ ತಾವು ನಂಬಿದ ಮೌಲ್ಯಗಳಿಗೆ ಬದ್ದರಾಗಿ ಪರೋಪಕಾರಕ್ಕಾಗಿಯೇ ಜೀವನವನ್ನು ತೇಯ್ದ ಹಿರಿಯ ವ್ಯಕ್ತಿಗಳು ಇಂದಿರಾ ಅವರ ಕೃತಿಗಳಲ್ಲಿ ಕಂಡುಬರುತ್ತಾರೆ. ಇಂತಹುದೇ ಒಂದು ಪಾತ್ರ ಫಣಿಯಮ್ಮ ಕೂಡ. ಕೂಪಮಂಡೂಕ ಪ್ರವೃತ್ತಿ, ಅಂಧಶ್ರದ್ಧೆ, ಮಡಿವಂತಿಕೆ ತುಂಬಿದ್ದ ಸಮಾಜದ ಕಪಿಮುಷ್ಠಿಯಲ್ಲಿ ಸಿಲುಕಿದ ಫಣಿಯಮ್ಮನ ಜೀವನ ಕಾದಂಬರಿಯ ವಸ್ತುವಾಗಿದೆ.

ಅಜ್ಞಾನದ ಅಂಧಕಾರ ಕವಿದ ಕ್ರೂರ ಸಮಾಜದಲ್ಲಿ ಬಾಳಿದ ಫಣಿಯಮ್ಮ ಒಂಭತ್ತು ವರ್ಷಕ್ಕೆ ವಿಧವೆಯಾಗಿ ನೂರ ಹನ್ನೆರಡು ವರ್ಷಗಳವರೆಗೆ ಜೀವನದ ಸುಖದು;ಖಗಳಿಂದ ವಂಚಿತಳಾಗಿ ಸುಧೀರ್ಘ ಜೀವನವನ್ನು ಕಳೆಯುತ್ತಾಳೆ. ಮದುವೆ, ಗಂಡ ಎಂಬುದರ ಅರ್ಥವನ್ನು ತಿಳಿಯದ ಫಣಿಯಮ್ಮನ ಬದುಕುವ ಹಕ್ಕನ್ನು ಸಮಾಜ ಕಸಿದುಕೊಳ್ಳುತ್ತದೆ. ಕಾದಂಬರಿಯಲ್ಲಿ ಫಣಿಯಮ್ಮ ತನ್ನ ಜೀವಿತದ ಕೊನೆಯುಸಿರಿರುವವಗೂ ಯಾರಿಗೂ ಸಮಸ್ಯೆಯಾಗದಂತೆ ತನ್ನ ಬದುಕನ್ನು ರೂಢಿಸಿಕೊಂಡು ಪೆಟ್ಟಿನ ಮೇಲೆ ಪೆಟ್ಟು ತಿಂದು ವಿಗ್ರಹದಂತೆ ಪೂಜನೀಯಳಾಗುತ್ತದೆ. ಸಮಾಜದ ಕಟ್ಟುಕಟ್ಟಳೆ ಅಂಧಶ್ರದ್ಧೆ ಇವು ಬಾಲವಿಧವೆಯರ ಬದುಕಿನಲ್ಲಿ ತುಂಬಬಹುದಾದ ನಷ್ಟವನ್ನು ದುರಂತವನ್ನು ಲೇಖಕಿ ಫಣಿಯಮ್ಮನ ಮೂಲಕ ತೋರಿಸಿದ್ದಾರೆ. ಅಷ್ಟೇ ಅಲ್ಲದೆ ಅಂಧಶ್ರದ್ಧೆ ತುಂಬಿದ ಸಮಾಜದ ಸಂಪ್ರದಾಯಕ್ಕೆ ನಿಷ್ಟರಾದ ಸ್ತ್ರೀಸಮಾಜದಿಂದಲೇ ಮತ್ತೊಬ್ಬ ಸ್ತ್ರೀಯಶೋಷಣೆ ನಡೆದು ಬರುವ ಅಜ್ಞಾನವನ್ನು ಕಂಡು ಲೇಖಕಿ ಮರುಗಿದ್ದಾರೆ. ಇಡೀ ಕಾದಂಬರಿಯಲ್ಲಿ ಫಣಿಯಮ್ಮ ಅಂದಿನ ಕ್ರೂರ ಸಮಾಜದ ಕುರುಡು ಕಟ್ಟಳೆಗಳಿಗೆ ಬಲಿಯಾದ ಸನ್ನಿವೇಶವನ್ನು ಅತ್ಯಂತ ದಾರುಣವಾಗಿ ಚಿತ್ರಿಸಿದ್ದಾರೆ.

ಈ ಕಾದಂಬರಿಯಲ್ಲೇ ಬರುವ ಫಣಿಯಮ್ಮನ ಪಾತ್ರಕ್ಕಿಂತ ಭಿನ್ನವಾದ ಪಾತ್ರ ದಾಕ್ಷಾಯಿಣಿಯದು. ವಿಧವೆಯಾದ ದಾಕ್ಷಾಯಿಣಿ ಬಸಿರಾದಾಗ, ಅತ್ತೆ ಮತ್ತು ಜನರೆಲ್ಲರೂ ಆಕೆಯನ್ನು ಕೌರಿಗೆ ಅಟ್ಟಬೇಕೆಂದು ಪ್ರಯತ್ನಪಟ್ಟಾಗ ಯಾರಿಗೂ ಜಗ್ಗದೆ ಅತ್ತೆಯನ್ನು ಪ್ರತಿಭಟಿಸಿದ ದಾಕ್ಷಾಯಿಣಿ ಬಂಡಾಯ ಪ್ರವೃತ್ತಿಯ ಸಂಕೇತವಾಗಿದ್ದು,ಈ ಪಾತ್ರ ಸಂಪ್ರದಾಯದಿಂದ ಸಂಪೂರ್ಣವಾಗಿ ಬಿಡಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಅವೈಚಾರಿಕತೆ, ಜಾತಿಪದ್ದತಿಯಲ್ಲಿ ನಂಬಿಕೆಯಿಡದ ಇಂದಿರಾ ಇವುಗಳನ್ನು ಕ್ಷುಲ್ಲಕ ಕಾರಣಗಳೆಂಬಂತೆ ಭಾವಿಸಿ ಇವುಗಳನ್ನು ಖಂಡಿಸುತ್ತಾ ಸಮಾಜದ ಬದಲಾವಣೆಗಾಗಿ ಸ್ಪಂದಿಸಿದ್ದಾರೆ, ಒತ್ತಾಯಿಸಿದ್ದಾರೆ.

ಫಣಿಯಮ್ಮನ್ನನ್ನು ಬೆಳಕಿಗೆ ತಂದಂತೆ ಲೇಖಕಿ "ತಗ್ಗಿನಮನೆಸೀತೆ" ಯನ್ನು ಬೆಳಕಿಗೆ ತಂದಿದ್ದಾರೆ. ಸುಮಾರು ಎಪ್ಪತ್ತು ವರ್ಷಕ್ಕೂ ಹಿಂದಿನ ಸಮಾಜದಲ್ಲಿ ಬಾಳಿದ ದಿಟ್ಟಮಹಿಳೆ ಸೀತೆ. ತಗ್ಗಿನಮನೆ ಸೀತೆಯ ಜೀವನ ಹಾಗೂ ಅವಳ ವ್ಯಕ್ತಿತ್ವವನ್ನು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಸ್ತ್ರೀಸ್ವಾತಂತ್ರ್ಯವಿಲ್ಲದ ಕಾಲದಲ್ಲಿ ಬಾಳಿದ ತಗ್ಗಿನಮನೆಸೀತೆ ಮಲೆನಾಡಿನ ಹಳ್ಳಿಗಳಲ್ಲಿ ಮೂಢನಂಬಿಕೆ, ಅಜ್ಞಾನ ತುಂಬಿದ್ದ ಕಾಲದಲ್ಲಿ ಬೆಳೆದರೂ ಎಲ್ಲಾ ಸ್ತ್ರೀಯರಿಗಿಂತಲೂ ಭಿನ್ನವಾಗಿ ಕಾಣಿಸಿಕೊಳ್ಳುತ್ತಾಳೆ, ಸೀತೆಯ ಪ್ರತಿಯೊಂದು ನಡೆನುಡಿಯಲ್ಲಿ ಬುದ್ಧಿವಂತಿಕೆ ವಿಚಾರಶಕ್ತಿ, ಧೈರ್ಯ, ಸಾಹಸಗಳು ವ್ಯಕ್ತವಾಗುತ್ತವೆ. ಇಲ್ಲಿ ಲೇಖಕಿ ಪುರುಷರ ದಬ್ಬಾಳಿಕೆ ಹಾಗೂ ಸ್ತ್ರೀ ವೈಚಾರಿಕತೆಯನ್ನು ಚಿತ್ರಿಸಿದ್ದಾರೆ'

ಇಂದಿರಾ ಅವರ ಶ್ರೇಷ್ಠ ಕಥಾವಸ್ತುವನ್ನೊಳಗೊಂಡ ಮತ್ತೊಂದು ಕಾದಂಬರಿ ಆತ್ಮಸಖಿ. ಲೇಖಕಿಯ ತಾಯಿಯ ಸೋದರಮಾವ ಅರಗತ ಅನಂತಶರ್ಮರ ಆದರ್ಶಮಯ ಜೀವನ ಈ ಕಾದಂಬರಿಯ ವಸ್ತುವಾಗಿದೆ, ಅನಂತಶರ್ಮರು ತಾವು ನಂಬಿದ ತತ್ತ್ವಗಳನ್ನು, ಮೌಲ್ಯಗಳನ್ನು ಬದುಕಿನುದ್ದಕ್ಕೂ ಪಾಲಿಸಿದವರು.ಅವರ ಬದುಕಿನ ಕೇಂದ್ರವಾಗಿ ಅವರ ಆದರ್ಶದ ಹೆಜ್ಜೆಯಲ್ಲಿ ತನ್ನ ಹೆಜ್ಜೆಯನ್ನಿರಿಸಿ ಆತ್ಮಸಖಿಯಾಗಿ ಬಾಳಿದವರು ಅವರ ಮಡದಿ ಸಾವಿತ್ರಿ. ಎಲೆಮರೆಯ ಫಲದಂತೆ ದೇಶಕ್ಕಾಗಿ ಆದರ್ಶ ಬದುಕನ್ನು ಬಾಳಿದ ಅನಂತಶರ್ಮರ ಮತ್ತು ಸಾವಿತ್ರಿಯ ಜೀವನದ ಬಗ್ಗೆ ಗೌರವ ಮೂಡಿಸುತ್ತದೆ.

ಒಟ್ಟಾರೆ ಇಂದಿರಾ ಅವರು ಕಾದಂಬರಿಗಳಲ್ಲಿ ಅನುಕಂಪ, ವ್ಯಂಗ್ಯ. ಸಹಾನುಭೂತಿಪರ ತಿಳಿಹಾಸ್ಯ ಮಿಂಚಿದ್ದು,ಮುಗ್ಧ,ಸರಳ,ನಿರಾಡಂಬರ ಶೈಲಿಯಿಂದ ಓದುಗರಿಗೆ ಆತ್ಮೀಯವಾಗಿವೆ. ಅವರು ತಮ್ಮ ಎಲ್ಲಾ ಕತೆ,ಕಾದಂಬರಿಗಳಲ್ಲಿ ವ್ಯಕ್ತಿಗಳ ವ್ಯಕ್ತಿತ್ವದ ವಿಕಾಸಕ್ಕೆ ಅಡ್ಡಿಯಾಗಬಲ್ಲ ಧಾರ್ಮಿಕವಾಗಿ ಬಲಿತೆಗೆದುಕೊಳ್ಳುವ ಧೂರ್ತರನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾರೆ. ಅದರಲ್ಲೂ ವಿಶೇಷವಾಗಿ ಇವರ ಕತೆ, ಕಾದಂಬರಿಗಳಲ್ಲಿ ಮಹಿಳಾ ಸಬಲೀಕರಣದ ಮಿಡಿತ ಹಾಗೂ ತುಡಿತವಿರುವುದನ್ನು ಕಾಣಬಹುದಾಗಿದೆ. ವಾಸ್ತವತೆಗೆ ನಿಷ್ಠರಾಗಿದ್ದರಿಂದಲೇ ಇಂದಿರಾ ಅವರು ಇಂದಿಗೂ ಅಸಂಖ್ಯಾತ ಜೊಳ್ಳುಗಳ ನಡುವೆ ಗಟ್ಟಿಕಾಳಾಗಿ ಉಳಿದಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು.

**ಪರಾಮರ್ಶನ ಗ್ರಂಥಗಳು**

೧. ಗೆಜ್ಜೆಪೂಜೆ ೧೯೬೬ ಹೇಮಂತ ಸಾಹಿತ್ಯ ಪ್ರಕಾಶನ ೧೯೬೬
೨. ಆಶೋಕ ಟಿ.ಪಿ ಸಾಹಿತ್ಯ ಸಂದರ್ಭ ಅಕ್ಷರ ಪ್ರಕಾಶನ ೧೯೯೧
೩. ತಗ್ಗಿನಮನೆಸೀತೆ ಪ್ರಕಾಶ ಸಾಹಿತ್ಯ ೧೯೮೩
೪. ಅಮೂರ.ಜಿ,ಎಸ್.ಕನ್ನಡ ಕಾದಂಬರಿಯ ಬೆಳವಣಿಗೆ, ಬೆಂಗಳೂರು ವಿಶ್ವ ವಿದ್ಯಾನಿಲಯ ೧೯೮೩
೫. ಅಮೂರ.ಜಿ,ಎಸ್.ಕನ್ನಡ ಕಥನ ಸಾಹಿತ್ಯ,ಕಾದಂಬರಿ,ಶ್ರೀಹರಿ ಪ್ರಕಾಶನ ಧಾರಾವಾಡ.